ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಆದಷ್ಟು ತೀವ್ರವಾಗಿ ಪರಿಹಾರ ಕೊಡುವುದಕ್ಕೆ ಏರ್ಪಾಡು ಮಾಡುತ್ತೇವೆ. ಮಾನ್ಯ ಸದಸ್ಯರು ಯಾರು ಯಾರಿಗೆ ಪರಿಹಾರಧನ ಮಂಜೂರಿಲ್ಲ ಎಂಬುದನ್ನು ತಿಳಿಸಿದರೆ ಆ ಬಗೆ ನಾವು ವಿವರಗಳನ್ನು ತರಿಸಿಕೊಂಡು ಜಾಗ್ರತೆ ಪರಿಹಾರ ಧನಕೊಡಲು ಏರ್ಪಾಡು ಮಾಡುತ್ತೇವೆ.

ಶ್ರೀ ಎಂ. ಗಂಗಣ್ಣ.—ಈಗ ಸುಮಾರು ಕೆರೆಗಳಲ್ಲಿ ನೀರು ನಿಂತಿರುವ ಕಾರಣದಿಂದ ಅಲ್ಲಿ ಮೊದಲು ಎಂತಹ ಜಮೀನು ಇತ್ತು, ಎಂತಹ ಬೆಳೆ ಬೆಳೆಯಲಾಗುತ್ತಿತ್ತು ಎಂಬುದು ನಮಗೆ ಗೊತ್ತಿಲ್ಲವೆಂದು ಲ್ಯಾಂಡ್ ಅಕ್ವಿಜಿಷನ್ ಆಫೀಸರ್ ಅವರು ಹೇಳುತ್ತಿದ್ದಾರೆ. ಇದರಿಂದ ಕೂಡ ಪರಿಹಾರಧನ ಸಿಗುವುದು ಗಗನಕುಸುಮವಾಗಿಬಿಟ್ಟಿದೆ. ಇಂತಹ ಸಂದರ್ಭಗಳಲ್ಲಿ ತಾವು ಯಾವರೀತಿ ತೀರ್ಮಾನ ಕೈಗೊಳ್ಳುತ್ತೀರಿ?

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಸಮಗ್ರವಾದ ಲಿಸ್ಟನ್ನು ತರಿಸಿಕೊಂಡು, ಅದಕ್ಕೆ ಏನೇನು ಮಾಡಬೇಕೋ ಅದನ್ನೆಲ್ಲಾ ಮಾಡುತ್ತೇವೆ.

Intermediary Institutions

532 SRI SHEERNALLY CHANDRA SHEKAR (Hosanagar).—Will the Minister for Co-operation be pleased to state.—

(a) whether there is any proposal before the Government to do away with the intermediaries like Apex Bank, D.C.C. Banks etc.,

(b) whether the Government is aware that the farmers in Karnataka has to pay exhorbitant rate of interest due to these intermediary institutions ;

(c) t action Government proposed to take in this regard?

SRI H. C. SRIKANTAIAH (Minister for Co-operation).—

(a) No

(b) No

(c) Does not arise (In view of replies (a) & (b) above).

ಶ್ರೀ ಎಸ್.ಎಂ. ಶೀರ್‌ನಾಳಿ ಚಂದ್ರಶೇಖರ್.—ನನ್ನ ಮೊದಲನೆಯ ಪ್ರಶ್ನೆಗೆ ಕೊಟ್ಟಿರುವ ಉತ್ತರದ ಬಗ್ಗೆ ನನ್ನ ತಕರಾರು ಏನಿಲ್ಲ. ಆದರೆ ನನ್ನ ಎರಡನೇ ಪ್ರಶ್ನೆಗೆ ಕೊಟ್ಟಿರುವ ಉತ್ತರ ನೋಡಿ ಬಹಳ ಆಶ್ಚರ್ಯವಾಗುತ್ತದೆ. ಏಕೆಂದರೆ ಇದು ಇಡೀ ಕರ್ನಾಟಕ ರಾಜ್ಯಕ್ಕೆ ಸಂಬಂಧಪಟ್ಟಿದೆ. ಮಾನ್ಯ ಮಂತ್ರಿಗಳು ಇದಕ್ಕೂ ಮೊದಲು ಈ ಸಹಕಾರೀ ಸಂಸ್ಥೆಯಲ್ಲಿ ಒಳ್ಳೆಯ ಅನುಭವ ಪಡೆದವರಾಗಿದ್ದಾರೆ ಮತ್ತು ಅಲ್ಲಿಯೇ ತೇಲಾಡಿ ಮುಳುಗಿದವರಾಗಿದ್ದಾರೆ. ಇಂತಹವರು ಈ ರೀತಿಯ ಉತ್ತರ ಕೊಟ್ಟರೆ ಹೇಗೆ? ಇದರಿಂದ ರೈತರಿಗೆ ಬಹಳಷ್ಟು ಅನಾಹುತವಾಗುತ್ತಿದೆ. ಈಗ ಕರ್ನಾಟಕದ ರೈತರು ಮಾರ್ವಾಡಿ ಬಡ್ಡಿಗಿಂತಲೂ ಹೆಚ್ಚು ಬಡ್ಡಿ ಕೊಡುತ್ತಿದ್ದಾರೆ. ಆದರೆ ಇದು ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಉತ್ತರ ಕೊಟ್ಟರೆ ಏನು ಹೇಳುವುದು?

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಈಗ ನಾವು ಬಡ್ಡಿ ದರ ಜಾಸ್ತಿ ಮಾಡಿಲ್ಲ. ಆದರೂ ಸಹ ಮಾನ್ಯ ಸದಸ್ಯರಿಗೆ ಏನು ಬವಣೆ ಇದೆಯೋ ಗೊತ್ತಿಲ್ಲ. The Reserve Bank rates are as follows :

Short term loans—6¼% Mediumterm loans—6½%
This is in respect of general lending. The Reserve Bank lending rate to Apex Bank is as follows :
Small farmers—6%, Medium term loans—6¼%
The Apex Bank charges DCC Banks as follows :
Short term loan to small farmers–6.75%
Short term loan to small farmers–6.25%
Medium term loan to big farmers – 6.50%
Medium term loan to big farmers – 6.60%
DCC Banks Loans in respect of SCS and VSS levels :

Short term loan to small farmers	9.20%
Short term loan to Big farmers	9.90%
Medium term loan	8.25% (Small farmers)
Medium term loan	9.25% (Big farmers)

The interest rate charged by SCS to its Members as follows :
Short term loan to small farmers – 11.85%
Short term loan to big farmers – 13%

ಎಂ. ಟಿ. ಲೋನ್ ೧೦.೫೦, ಬಿಗ್ ಫಾರ್ಮರ್ಸ್‌ಗೆ ೧೨.೫೦. ಇದು ಇರತಕ್ಕಂಥ ಬಡ್ಡಿ ದರ. ವಿವಿಧ ಹಂತಗಳಲ್ಲಿ ಇದನ್ನು ಫಿಕ್ಸ್ ಮಾಡಬೇಕಾದರೆ ತಮಗೆ ಗೊತ್ತಿರುವ ಹಾಗೆ, ನ್ಯಾಷನಲ್ ಪಾಲಿಸಿ ಇದೆ. The Reserve Bank has got limitations. ಇದನ್ನು ಏನಾರಿ ಹೋಗುವ ಹಾಗಿಲ್ಲ. ಮರುಪಾವತಿಯಾದಂಥ ಬಡ್ಡಿಗೂ ಇದಕ್ಕೂ ಸಂಬಂಧವಿಲ್ಲ. ಇದು ೧೫ ಪರ್ಸೆಂಟ್ ಇದೆ. ಇದು ಕೊನೆಗೆ ರೈತರಿಗೆ ಮುಟ್ಟತಕ್ಕಂಥಾದ್ದು. ಸ್ಮಾಲ್ ಫಾರ್ಮರ್ಸ್‌ಗೆ ೧೧.೮೫ ಇದೆ. ಇದಕ್ಕೆ ರಿಯಾಯಿತಿ ಕೊಡಬೇಕು ಎಂದು ಮಾನ್ಯ ಅರ್ಥ ಮಂತ್ರಿಗಳು ಬಜೆಡ್ ಭಾಷಣದಲ್ಲಿ ಹೇಳಿದರು. ಅದು ಇನ್ನೂ ಪರಿಶೀಲನೆಯಲ್ಲಿದೆ ಸ್ಮಾಲ್ ಫಾರ್ಮರ್ಸ್‌ಗೆ ಯಾವರೀತಿ ರಿಯಾಯಿತಿ ಕೊಡಬೇಕು ಎನ್ನುವುದು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎಸ್.ಎಂ. ಶೀರ್ನಾಳಿ ಚಂದ್ರಶೇಖರ್.—ನನ್ನ ಪ್ರಶ್ನೆಯಾದರೋ ಸ್ವಚ್ಛವಾಗಿದೆ. ಮಧ್ಯವರ್ತಿಗಳಿರುವುದರಿಂದ ತಾನೇ ರೈತರಿಗೆ ಬಡ್ಡಿ ದರ ಜಾಸ್ತಿಯಾಗುತ್ತಾ ಇರುವುದು. ರಿಸರ್ವ್ ಬ್ಯಾಂಕ್ ಕೊಡತಕ್ಕಂಥ ಸಾಲದ ಮೇಲಿರತಕ್ಕ ಬಡ್ಡಿಗೂ, ಕೊನೆ ಹಂತದಲ್ಲಿ ತೆಗೆದುಕೊಳ್ಳುವವರೆ ಬಡ್ಡಿಗೂ ಒಂದಕ್ಕೆರಡರಷ್ಟು ಇದೆ. ಆದುದರಿಂದ ಈ ಮಧ್ಯವರ್ತಿಗಳನ್ನು ಹೋಗಲಾಡಿಸತಕ್ಕ ಯೋಜನೆ ಸರ್ಕಾರದಲ್ಲಿದೆಯೇ? ಇದನ್ನು ಹೋಗಲಾಡಿಸಿ ರೈತರಿಗೆ ಕಡಿಮೆ ಬಡ್ಡಿದರ ಹಾಕುವುದಕ್ಕಾಗುವುದಿಲ್ಲವೇ?

ಅಧ್ಯಕ್ಷರು.—ಅಂದರೆ ರಿಜರ್ವ್ ಬ್ಯಾಂಕ್‌ನಿಂದ ನೇರವಾಗಿ ಕೊಡಿ ಎಂದು ಹೇಳುತ್ತಿದ್ದಾರೆ.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ನೇರವಾಗಿ ಮಾನ್ಯ ಶೀರ್ನಾಳಿ ಚಂದ್ರಶೇಖರ್ ಅವರಿಗೇ ಕೊಡಬೇಕು. ಇದು ಆಲ್ ಇಂಡಿಯಾ ಪಾಲಿಸಿ ಇದೆ. ಕರ್ನಾಟಕ ರಾಜ್ಯ ಸರ್ಕಾರದ ಒಂದೇ ಪಾಲಿಸಿ ಅಲ್ಲ. ಅಂಥಾದ್ದು ಪರಿಶೀಲನೆಯಲ್ಲಿ ಇಲ್ಲ.

ಶ್ರೀ ಪರಪ್ಪ ಕಳ್ಳಿಗುಡ್ಡ.—ಮಾನ್ಯ ಸಹಕಾರ ಮಂತ್ರಿಗಳು ಬಡ್ಡಿ ಬಗ್ಗೆ ಹೇಳಿದರು. ಬಾಗಲಕೋಟೆಯಲ್ಲಿಳಿ ಸೊಸೈಟಿಗಳಿವೆ. ಮಧ್ಯವರ್ತಿಗಳಿಂದ ಸಾಲ ಪಾವತಿ ಆಗಿಲ್ಲ. ಬ್ಯಾಂಕ್‌ನಲ್ಲಿ ಆದನ್ನು ಚೇಂಜ್ ಮಾಡುತ್ತಾ ಇದ್ದಾರೆ. ಬ್ಯಾಂಕಿನ ಮ್ಯಾನೇಜರ್, ಮ್ಯಾನೇಜಿಂಗ್ ಡೈರಕ್ಟರ್ ಸಾಲ ಪರಿಹಾರ ಮಾಡಿ

ಕಾಗದದಲ್ಲಿ ಉಡಾಫ್ ಮಾಡಿಕೊಳ್ಳುತ್ತಾರೆ. ಮೇಲಿನವರು ಅವತ್ತೇ ಸ್ಕ್ಯಾಂಕ್ಷನ್ ಮಾಡಿರುತ್ತಾರೆ, ಸಾಲ ಪಾವತಿ ಆಗಿರುವುದಿಲ್ಲ. ಇದು ಯಾವಾಗ ಪರಿಹಾರವಾಗುತ್ತದೆ, ಅಧಿಕಾರಿಗಳು ಏನು ಮಾಡುತ್ತಾರೆ.

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ್ದು ಪೂರ್ಣವಾಗಿ ಅರ್ಥವಾಗಲಿಲ್ಲ. ಯಾವ ಸೊಸೈಟಿಯೋ, ಯಾವ ಅಧಿಕಾರಿಗಳೂ ನನಗೆ ಗೊತ್ತಾಗಲಿಲ್ಲ. ಅದಕ್ಕೆ ಬೇರೆ ಪ್ರಶ್ನೆ ಹಾಕಿದರೆ ಉತ್ತರ ಕೊಡುತ್ತೇನೆ.

ಶ್ರೀ ಪರಪ್ಪ ಕಳ್ಳಿಗುಡ್ಡ.—ಡಿಸ್ಟ್ರಿಕ್ಟ್ ಸೆಂಟ್ರಲ್ ಕೋ ಆಪರೇಟೀವ್ ಬ್ಯಾಂಕ್. ಅದರಲ್ಲಿ ಸಾಲ ಪಾವತಿ ಆಗಿಲ್ಲ. ತಮ್ಮ ಅಧಿಕಾರಿಗಳಿಗೆ ತಪಾಸು ಮಾಡಲಿಕ್ಕೆ ಹೇಳಿ.

ಶ್ರೀ ಎಚ್.ಸಿ. ಶ್ರೀಕಂಠಯ್ಯ —ವಿವರವಾಗಿ ವಿಷಯ ಬರೆದು ಕೊಟ್ಟರೆ ನೋಡಿಸುತ್ತೇನೆ.

ಅಧ್ಯಕ್ಷರು.—ಕೊಡುವುದು ತೆಗೆದುಕೊಳ್ಳುವುದು ಆಗುವುದಿಲ್ಲ. ಬರೀ ಅಡ್ಜಸ್ಟ್‌ಮೆಂಟ್ ಆಗುತ್ತಾ ಇರುತ್ತದೆ ಎಂದು ಹೇಳುತ್ತಿದ್ದಾರೆ.

ಶ್ರೀ ಪರಪ್ಪ ಕಳ್ಳಿಗುಡ್ಡ.—ನಿಮ್ಮ ಅಧಿಕಾರಿಗಳಿಗೆ ಗೊತ್ತಿದೆ, ಮುಚ್ಚಿಲ್ಲ ವ್ಯಾಪಾರ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಉತ್ತರ ಕೊಡುವಾಗ ಒಪ್ಪಿಕೊಂಡಿದ್ದಾರೆ. ರಿಸರ್ವ್ ಬ್ಯಾಂಕ್‌ನಿಂದ ಸೇವಾ ಸಹಕಾರಿ ಸಂಸ್ಥೆಗೆ ಬರಬೇಕಾದರೆ ಒಂದಕ್ಕೆರಡರಷ್ಟು ಬಡ್ಡಿ ದರ ಆಗುತ್ತದೆ. ಇದಕ್ಕಾಗಿ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಕಂತು ಒಂದು ವರ್ಷದಲ್ಲಿ ಕಟ್ಟದೇ ಹೋದರೆ ಪೀನಲ್ ಇಂಟರೆಸ್ಟ್ ಕೊಡಬೇಕಾಗುತ್ತದೆ. ಪೀನಲ್ ಇಂಟರೆಸ್ಟ್ ರೈತನ ಮೇಲೆ ಬೀಳುತ್ತದೆ. ಅದನ್ನು ಪರಿಹರಿಸಲಿಕ್ಕೆ ಕೆಲವಾರು ಸಂಸ್ಥೆಗಳನ್ನು ಅಬಾಲಿಷ್ ಮಾಡುತ್ತೀರಾ?

ಶ್ರೀ ಎಚ್.ಸಿ.ಶ್ರೀಕಂಠಯ್ಯ.—ಇರತಕ್ಕಂಥಾದ್ದು ಕೋ ಆಪರೇಟೀವ್ ಅಪೆಕ್ಸ್ ಬ್ಯಾಂಕ್, ಡಿ.ಸಿ.ಸಿ. ಬ್ಯಾಂಕ್ ಮತ್ತು ಗ್ರಾಮಾಂತರ ಸೇವಾ ಸಹಕಾರಿ ಸಂಘ. ಇನ್ನಾವ ಮಧ್ಯವರ್ತಿ ಸಂಸ್ಥೆಯೂ ಇಲ್ಲ. ರಿಸರ್ವ್ ಬ್ಯಾಂಕ್‌ನಿಂದ ಅಪೆಕ್ಸ್ ಬ್ಯಾಂಕ್‌ಗೆ ಕೊಡುತ್ತಾರೆ. ಅಪೆಕ್ಸ್ ಬ್ಯಾಂಕ್‌ನಿಂದ ಡಿ.ಸಿ.ಸಿ ಬ್ಯಾಂಕ್‌ಗೆ ಕೊಡುತ್ತಾರೆ, ಡಿಸಿಸಿ ಬ್ಯಾಂಕ್‌ನಿಂದ ಸೇವಾ ಸಹಕಾರಿ ಸಂಘಕ್ಕೆ ಕೊಡುತ್ತಾರೆ. ಇನ್ನು ಮಧ್ಯವರ್ತಿ ಎಲ್ಲಿಂದ ಬಂತು.

ಶ್ರೀ ಎಸ್.ಎಂ. ಶೀರ್ನಾಳಿ ಚಂದ್ರಶೇಖರ್.—ರಿಸರ್ವ್ ಬ್ಯಾಂಕ್‌ನಿಂದ ಅಪೆಕ್ಸ್ ಬ್ಯಾಂಕ್. ಅಪೆಕ್ಸ್ ಬ್ಯಾಂಕ್‌ನಿಂದ. ಡಿ.ಸಿ.ಸಿ. ಬ್ಯಾಂಕ್ ಡಿ.ಸಿ.ಸಿ. ಬ್ಯಾಂಕ್‌ನಿಂದ ಸೇವಾ ಸಹಕಾರ ಸಂಸ್ಥೆಗೆ ಬರಬೇಕಾದರೆ ಕೊನೆಗೆ ೧೩ ಪರ್ಸೆಂಟ್ ಬಡ್ಡಿ ಆಗುತ್ತದೆ. ಇದೇ ಮಧ್ಯವರ್ತಿ. ಅದನ್ನು ಮಿನಿಮೈಸ್ ಮಾಡುವುದಕ್ಕೆ ಸಾಧ್ಯವಿಲ್ಲವೇ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಮಾನ್ಯ ಸದಸ್ಯರಾದ ಶೀರ್ನಾಳಿ ಚಂದ್ರಶೇಖರ್‌ರವರ ಜಿಲ್ಲೆ ಒಳಗೇ ಸಾಲ ಪಾಪಸ್ ಕೊಟ್ಟ ಪ್ರಾಕ್ಟೀಸ್ ಇಲ್ಲ. ಬಡ್ಡಿ ವಿಷಯ ಏಕೆ ಯೋಚನೆ ಮಾಡುತ್ತಾರೆ.

SRI S.M. SHERNALY CHANDRASEKAR.—It is too much.

ಶ್ರೀ ಕೆ. ನಾರಾಯಣಪ್ಪ.—ಹತ್ತಾರು ಸಾವಿರ ಲೋನ್‌ಗಳನ್ನು ತೆಗೆದುಕೊಂಡಿರುವವರು ಒಂದೇ ಕಂತಿನಲ್ಲಿ ಕೊಡುವುದಕ್ಕೆ ರೆಡಿ ಇರುವಾಗ ಕಾನೂನನ್ನು ಸಡಿಲಮಾಡಿ ಸುಸ್ತಿ ಬಡ್ಡಿಯಿಂದ ರಿಯಾಯಿತಿ ಮಾಡಿಕೊಡುತ್ತೀರಾ?

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಇನ್ನೊಂದು ಸಲ ಕೇಳಿ.

ಶ್ರೀ ಕೆ. ನಾರಾಯಣಪ್ಪ.—ಹತ್ತಾರು ಸಾವಿರ ಲೋನ್ ತೆಗೆದುಕೊಂಡಿರುತ್ತಾರೆ. ಕೆಲವರು ಒಂದು ಲಕ್ಷ ರೂಪಾಯಿಗಳನ್ನು ಒಂದೇ ಕಂತಿನಲ್ಲಿ ತೀರಿಸುವುದಕ್ಕೆ ರೆಡಿಯಾಗಿರುತ್ತಾರೆ. ಅಂತಹವರಿಗೆ ಬಡ್ಡಿ, ಸುಸ್ತಿ ಬಡ್ಡಿಯಿಂದ ರಿಯಾಯಿತಿ ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶ ಮಾಡಿಕೊಡಬೇಕು.

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಒಂದೇ ಕಂತಿನಲ್ಲಿ ಸಾಲ ಕೊಡುವುದಾದರೆ ಸುಸ್ತಿ ಬಡ್ಡಿ ಪ್ರಶ್ನೆ ಉದ್ಭವವಾಗುವುದಿಲ್ಲ. ಮಾಮೂಲಿ ಬಡ್ಡಿ ಕೊಡಬೇಕು. ಒಂದೇ ಕಂತಿನಲ್ಲಿ ಹಣ ಕೊಡುವುದಾದರೆ ಸುಸ್ತಿ ಬಡ್ಡಿ ಉದ್ಭವವಾಗುವುದಿಲ್ಲ.

ಶ್ರೀ ಕೆ. ನಾರಾಯಣಪ್ಪ.—ಲೋನ್ ತೆಗೆದುಕೊಂಡು ೫–೬ ವರ್ಷ ಆಯಿತಂ, ಹರಾಜಿಗೆ ಬಂದಾಗ ಪೂರ್ತಿ ಹಣ ಕೊಡುವಂಥ ಸಂದರ್ಭ ಬಂದಾಗ ಏನು ರಿಯಾಯಿತಿ ಕೊಡುತ್ತೀರಿ.

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಇಂಥಾ ವರ್ಷ, ಇಂಥಾ ತಿಂಗಳು ಎಂದು ಇರುತ್ತದೆ. ಅಂಥಾ ನಿಗದಿಯಾದ ಕಾಲದಲ್ಲಿ ಕೊಟ್ಟರೆ ರಿಯಾಯಿತಿ ಸಿಗುತ್ತದೆ.

ಶ್ರೀ ವಿ. ಮಸಿಯಪ್ಪ.—ಆ ವಾಯಿದೆ ಮುಗಿದುಹೋಗಿದೆ. ಮುಗಿದು ಹೋಗಿರತಕ್ಕ ಸಂದರ್ಭದಲ್ಲಿ ಹಣ ಕೊಡತಕ್ಕವರು ಡಿಫಾಲ್ಟರ್ ಆಗಿರುವುದರಿಂದ ಅವರಿಗೆ ಪುನಃ ವಾಯಿದೆಯನ್ನು ಎಕ್ಸ್‌ಟೆಂಡ್ ಮಾಡಿ ಪರಿಹಾರ ಕೊಡುತ್ತೀರಾ ಎಂದು ಕೇಳುತ್ತಾ ಇದ್ದೇನೆ.

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಒಂದು ವಾಯಿದೆ ಗೊತ್ತು ಮಾಡಿದೆ. ಆದರೂ ವಾಯಿದೆಯೊಳಗೆ ಹಣವನ್ನು ಕೊಟ್ಟಿಲ್ಲ ಅಥವಾ ಯಾರು ಕೊಡುತ್ತೇವೆ ಏಂದು ಬಂದರೆ ಅವರಿಗೆ ಎಷ್ಟು ರಿಯಾಯಿತಿ ಕೊಡಬೇಕೋ ಅದನ್ನು ಸರ್ಕಾರ ಯೋಚನೆ ಮಾಡುತ್ತದೆ.

ಶ್ರೀ ಎಸ್ ಎಂ. ಶೀರ್ನಾಳಿ ಚಂದ್ರಶೇಖರ್.—ಮಾನ್ಯ ಮಂತ್ರಿಗಳು ತಪ್ಪು ತಿಳಿದುಕೊಂಡಿದ್ದಾರೆ. ನನಗೆ ಸಹಕಾರಿ ಸಂಸ್ಥೆಗಳಿಂದ ಒಂದು ದಮಡಿ, ಒಂದು ಪೈಸೆ ಸಾಲ ಇಲ್ಲ.

ಅಧ್ಯಕ್ಷರು.—ನಿಮ್ಮನ್ನು ಕರಿತು ಅವರು ಹೇಳಿಲಿಲ್ಲ, ತಾವು ಆದನ್ನು ರೈಟಾಗಿ ತೆಗೆದುಕೊಳ್ಳಬೇಕು, ಬಹಳ ಸೀರಿಯಸ್ಸಾಗಿ ತೆಗೆದುಕೊಳ್ಳಬೇಡಿ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ನಾನು ಯಾವಾಗಲೂ ಸೀರಿಯಸ್ಸಾಗಿ ತೆಗೆದು ಕೊಂಡಿಲ್ಲ.

ಅಧ್ಯಕ್ಷರು.—ನಿಮ್ಮ ಜಿಲ್ಲಾ ಬ್ಯಾಂಕ್ ಸಾಲ ತೆಗೆದುಕೊಳ್ಳುವ ಪರಿಸ್ಥಿತಿಯಲ್ಲಿದೆಯೇ?

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ನಿಮ್ಮ ಜಿಲ್ಲಾ ಬ್ಯಾಂಕ್ ಸಾಲ ತೆಗೆದುಕೊಳ್ಳುವ ಪರಿಸ್ಥಿತಿಯಲ್ಲಿಲ್ಲ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಇವತ್ತು ರಿಜರ್ವ್ ಬ್ಯಾಂಕ್‌ನಿಂದ ನೇರವಾಗಿ ತಾಲ್ಲೂಕು ಮಟ್ಟದಲ್ಲಿ ವ್ಯವಹರಿಸಲಿಕ್ಕೆ ಏಕೆ ಆಗುವುದಿಲ್ಲ. ಜಿಲ್ಲಾ ಬ್ಯಾಂಕ್ ಏಕೆ ಇರಬೇಕು. ಇದು ತಲೆ ಶಿರೋಭಾರ. ಜಿಲ್ಲಾ ಬ್ಯಾಂಕ್ ಅವಶ್ಯಕತೆ ಇದೆಯೇ?

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಸರ್ಕಾರ ಒಂದು ಕಾನೂನು ಮಾಡಿದರೂ ಪರ್ವಾಗಿಲ್ಲ. ಕಡ್ಡಾಯವಾಗಿ ಸಾಲ ವಾಪಸ್ ಕೊಡಿಸಲಿ, ಆಮೇಲೆ ಕಾಂಪನ್‌ಸೇಷನ್ ಕೊಡುವುದನ್ನು ನೋಡೋಣ. ಮೊದಲು ಮರುಪಾವತಿಯಾಗಲಿ.

SRI S. M. SHEERNALY CHANDRA SHEKAR.—It is unnecessary burden on the ryots.

ಶ್ರೀ ಎಲ್.ಟಿ. ತಿಮ್ಮಪ್ಪ ಹೆಗ್ಗಡೆ.—ಯಾರು ಸಾಲ ವಾಪಸ್ ಕೊಡುವುದಿಲ್ಲ ಅಂಥವರ ಬಗ್ಗೆ ಟೀಕೆ ಮಾಡಬೇಕೇ ಹೊರತು, ನಮ್ಮ ಜಿಲ್ಲೆಯ ಮೇಲೆ ಸುಮ್ಮನೆ ಆಪಾದನೆ ಹಾಕಬಾರದು.

Construction of K. S. R. T. C. Bus Stand at Chitradurga Town.

11 SRI V. MASIYAPPA (Chitradurga).—Will the Minister for Transport and Minor Irrigation be pleased to state.—

(a) the date on which the work of K.S.R.T.C. Bus stand was commenced at Chitradurga Town ;